# ST. FRANCIS DE SALES COLLEGE

A FRANSALIAN INSTITUTE OF HIGHER EDUCATION AUTONOMOUS

NAAC A GRADE • AFFILIATED TO BANGALORE UNIVERSITY • AICTE APPROVED • 2(F) & 12 (B) RECOGNITION OF UGC • ISO 9001:2015 CERTIFIED

Electronics City P.O., Bengaluru - 560 100, Karnataka, INDIA (+91) 8088140679 pro@sfscollege.in www.sfscollege.in


## END SEMESTER EXAMINATION – NOV/DEC 2025

## KANNADA – I SEMESTER BCOM

## 25BCO11K: ವಾಣಿಜ್ಯ ಕನ್ನಡ 1

**Time: 3 Hours** **Max. Marks: 80**

**I. ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರ ಬರೆಯಿರಿ (160 ಪದಗಳಿಗೆ ಮೀರದಂತೆ)** 3x10=30

1. ಝೆನ್ ಕಥೆಗಳಲ್ಲಿ ಬರುವ ಮೂರು ಸಂದರ್ಭಗಳನ್ನು ಪಠ್ಯದ ಹಿನ್ನೆಲೆಯಲ್ಲಿ ಬರೆಯಿರಿ.
2. ಪಂಪ, ರನ್ನ, ಕುಮಾರವ್ಯಾಸ ಇವರಲ್ಲಿ ಇಬ್ಬರ ಕವಿ, ಕೃತಿ ಪರಿಚಯಿಸಿ.
3. "ಮನಸ್ಸಿಗೆ ಮೂಗುದಾರ" ಲೇಖನದಲ್ಲಿ ಧಾರ್ಮಿಕ ಮನೋ ನಿಯಂತ್ರಣವನ್ನು ಕುರಿತು ಹೇಗೆ ವಿವರಿಸಲಾಗಿದೆ?
4. ಯಾವುದಾದರೂ ನಾಲ್ಕು ರಿಟೇಲ್ ವ್ಯಾಪಾರಗಳ ಬಗ್ಗೆ ಬರೆಯಿರಿ.

**II. ಯಾವುದಾದರೂ ಐದು ಪ್ರಶ್ನೆಗಳಿಗೆ ಉತ್ತರ ಬರೆಯಿರಿ. (80 ಪದಗಳಿಗೆ ಮೀರದಂತೆ)** 5x5=25

1. ತತ್ಸಮ ತದ್ಭವ ಎಂದರೇನು? ಉದಾಹರಣೆಗಳೊಂದಿಗೆ ಬರೆಯಿರಿ.
2. ಹಚ್ಚೇವು ಕನ್ನಡದ ದೀಪ ಕವಿತೆಯ ಸಾರಾಂಶ ಬರೆಯಿರಿ.
3. ಕನ್ನಡ ಭಾಷೆಯ ಸೊಗಸನ್ನು ಕವಿ "ಕಾಣಿಕೆ" ಪದ್ಯದ ಮೂಲಕ ಹೇಗೆ ನಿರೂಪಿಸಿದ್ದಾರೆ?
4. ಗಾಂಧೀಜಿಯವರು ನಡೆಸಿದ ವಸ್ತ್ರದಹನ ಚಳುವಳಿಯ ಹಿಂದಿನ ಉದ್ದೇಶವೇನು? ಚರ್ಚಿಸಿ.
5. ಸ್ಥಳೀಯ ಮತ್ತು ವಿಶ್ವಾತ್ಮಕ ಎಂದು ಯಾವ ಯಾವ ಸಂಗತಿಗಳನ್ನು ಗುರುತಿಸಬಹುದು? ಏಕೆ?
6. ಸಾಲ ಮನ್ನಾ ಬಗ್ಗೆ ನಿಮ್ಮ ನಿಲುವುಗಳೇನು? ಮಂಡಿಸಿ.

**III. ಕೆಳಕಂಡ ಪಠ್ಯವನ್ನು ಮೂರನೇ ಒಂದು ಭಾಗಕ್ಕೆ ಸಂಕ್ಷೇಪಿಸಿ ಬರೆದು, ಸೂಕ್ತ ಶೀರ್ಷಿಕೆ ನೀಡಿ.** 1x5=5

ಕುದುರೆಮುಖದ ಗಣಿಗಾರಿಕೆಯಿಂದ ಚಿನ್ನ ಸಿಗುವುದಾದರೂ ನಮಗದು ಬೇಕಿಲ್ಲ ಎಂದು ನಾವು ತಿಳಿದುಕೊಂಡು ವರ್ತಿಸಬೇಕು. ನಿತ್ಯ ದುಡಿಯುವ ಒಬ್ಬ ಮನುಷ್ಯ ಮತ್ತೆ ನಾಳೆ ದುಡಿಯಲು ಬೇಕಾಗುವ ಆಹಾರವನ್ನು ಸಂಪಾದಿಸುತ್ತಾನೆ. ಹೀಗೆ ಶಕ್ತಿ ಪಡೆದು ದುಡಿಮೆಗೆ ಉಪಯೋಗಿಸುತ್ತಾ ಇರುವ ನಮ್ಮ ಅಸಂಖ್ಯಾ ದುಡಿಮೆಗಾರರು ಪರಾಗಸ್ಪರ್ಷಕ್ಕೆ ಕಾದಿರುವ ಹೂವಿನಂತಿರುತ್ತಾರೆ. ಯಾವುದೋ ದುಂಬಿ ಆಕಸ್ಮಿಕವಾಗಿ ಬಂದು ತನ್ನನ್ನು ಮುಟ್ಟಿತೆನ್ನುವ ಭರವಸೆಯಲ್ಲಿ ಗಾಳಿಯಲ್ಲಿ ಇರುವ ಹೂವಿನ ಹಾಗೆ ಇದ್ದುಬಿಡುತ್ತಾರೆ. ಯಾವುದೇ ದೈವ ತಮ್ಮನ್ನು ಬಂದು ಮುಟ್ಟಿತೆನ್ನುವ ಭರವಸೆಯಲ್ಲಿ, ಹರಕೆಯಲ್ಲಿ ಬಾಳುತ್ತಾ ನದಿಗಳ ಸಂಗಮದಲ್ಲಿ ಸಹಸ್ರ ಸಂಖ್ಯೆಯಲ್ಲಿ ಮಿಯುತ್ತಾ, ಕಾಲ್ನಡಿಗೆಯಲ್ಲಿ ಇರುವ ಅಪಾರ ಜನ ಕೋಟಿ ನಮ್ಮ ದಿನನಿತ್ಯದ ಬದುಕನ್ನು ಅರ್ಥಪೂರ್ಣವನ್ನಾಗಿ ಮಾಡಬಲ್ಲರು. ದೇವರು ಇದ್ದಾನೋ ಇಲ್ಲವೋ ತಿಳಿಯದು. ಪ್ರಾಯಶ ಅವನನ್ನು ಮುಟ್ಟುವ ಭರವಸೆಯಲ್ಲಿ ಎಲ್ಲರೂ ಕೊನೆಗೆ ಸಾಯುವುದೇನೋ? ಹೀಗೆ ನಿತ್ಯದ ದುಡಿಮೆಯ ಕಾಯಕ ಮತ್ತು ಅಗೋಚರವಾದುದ್ದರ ಭರವಸೆಯ ಈ ಜೀವನದಲ್ಲಿ ಭಾರತದ ಅಪಾರ ಜನಸಂಖ್ಯೆಗೆ ನಿಜವಾಗಿ ಸಿಗುವುದು ಮಕ್ಕಳ ಲಾಲನೆ, ಪಾಲನೆ, ಹಬ್ಬ ಹರಿದಿನಗಳ ಊಟ, ಕೊಂಚ ಬಿಡುವಿದ್ದಾಗ ನಡೆಯುವ ಕಾಡು ಹರಟೆ ಇವುಗಳಲ್ಲೇ.

ಇದನ್ನು ಈ ಸಂದರ್ಭದಲ್ಲಿ ಮಾತಾಡುವುದೇ ಓದುಗರಿಗೆ ವಿಚಿತ್ರ ಎನ್ನಿಸಬಹುದು. ಆದರೆ ಬದುಕಿನ ಈ ಸ್ಥಾಯಿ ಸ್ವರೂಪವನ್ನು ಮತ್ತು ಅದರ ಸಂಚಾರಿ ಕನಸುಗಳನ್ನು, ಹೃದಯದಲ್ಲಿ ಅರಿತು ದುಡಿಯುವವರಿಗೆ ದೇಶದ ಉತ್ಪಾದನೆಯನ್ನು ಹೆಚ್ಚಿಸುವ ಈಚಿನ ಅನೇಕ ಯೋಜನೆಗಳು ಕ್ರಿಮಿನಲ್ ವಿಚಾರವಾಗಿ ಭಾಸವಾಗುತ್ತದೆ. ವೇಗವಾಗಿ ಹೋಗುವ ಕಾರುಗಳಿಗಾಗಿ ನಾವು ಮಾಡುವ ರಸ್ತೆಗಳನ್ನು ಕಂಡಾಗ ಒಬ್ಬ ಮುದುಕಿ, ಮುದುಕ ಅಥವಾ ಮಗು ರಸ್ತೆಯ ಈ ಬದಿಯಿಂದ ಇನ್ನೊಂದು ಬದಿಗೆ ಹೋಗುವುದೇ ಅಸಾಧ್ಯವಲ್ಲವೇ ಅನ್ನುವ ಸಂಕಟ ಉಂಟಾದರೆ ನಾವು ಮನುಷ್ಯರು. ಬದಲಾಗಿ ಎಷ್ಟು ವೇಗವಾಗಿ ಒಂದು ಕಾರು ಸಂಚರಿಸಬಲ್ಲದು ಎಂದು ಯೋಚಿಸಿದರೆ ನಾವು ರಾಕ್ಷಸರು.

**IV. ಸಂಕ್ಷೇಪಿಸಿದ ಬರಹ ಆಧರಿಸಿ ಎರಡು ಪ್ರಶ್ನೆ ರೂಪಿಸಿ.** 2x1=2

**V. ಇವುಗಳಲ್ಲಿ ಎರಡು ಪದಗಳಿಗೆ ಸ್ವಂತ ವಾಕ್ಯ ರಚಿಸಿ.** 2x2=4

1. ಭರವಸೆ 2. ಮೂಗುದಾರ

3. ಹುಡುಕಾಟ 4. ವರದಕ್ಷಿಣೆ

**VI. ನಿಮ್ಮ ಊರಿನಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಮಾಡುವಂತೆ ಕೋರಿ ನಿಮ್ಮ ಗ್ರಾಮ ಪಂಚಾಯಿತಿ ಅಧ್ಯಕ್ಷರಿಗೆ ಒಂದು ಪತ್ರ ಬರೆಯಿರಿ.** 1x5=5

**VII. ಇವುಗಳಲ್ಲಿ ನಾಲ್ಕು ಪದಗಳಿಗೆ ಅರ್ಥ ಬರೆಯಿರಿ.** 4x1=4

1. ಕೋಡು 2. ಹುರುಳು 3. ಇನಿಯ

4. ಪಡುವಣ 5. ಕಿರಾಣಿ 6. ಕಳೆ

**VIII. ಇವುಗಳಿಗೆ ಒಂದೊಂದು ಸರಿ ಉತ್ತರವನ್ನು ಗುರ್ತಿಸಿ ಬರೆಯಿರಿ.** 5x1=5

1. ಭಾಷೆ ಎಂದರೆ ರಷ್ಯನ್ ಭಾಷೆಯಲ್ಲಿ.............

ಎ) ಪುಸ್ತಕ ಬಿ) ಜನತೆ ಸಿ) ಸಮಾಜ ಡಿ) ನಂಬಿಕೆ

2. ರವೀಂದ್ರನಾಥ ಟ್ಯಾಗೋರ್ ಸ್ಥಾಪಿಸಿದ ಶಿಕ್ಷಣ ಸಂಸ್ಥೆ.

ಎ) ಅನಿಕೇತನ ಬಿ) ಶಾಂತಿನಿಕೇತನ ಸಿ)ಚೇತನ ಡಿ) ಕಲಾನಿಕೇತನ

3. "ಲೆಟ್ ಅವರ್ ಚಿಲ್ಡ್ರನ್ ಗೋ" ಪುಸ್ತಕ ಬರೆದವರು ಯಾರು?

ಎ) ವಾಟ್ಸನ್ ಬಿ) ಪ್ಯಾಟ್ರಿಕ್ ಸಿ) ಹಕ್ಸಲಿ ಡಿ) ಸ್ಕಿನ್ನರ್

4. "ಕಾಣಿಕೆ" ಕವಿತೆಯನ್ನು ಬರೆದವರು ಯಾರು?

ಎ) ತಿ.ನಂ.ಶ್ರೀ ಬಿ) ಬಿ.ಎಂ.ಶ್ರೀ ಸಿ) ಬೇಂದ್ರೆ ಡಿ) ಸಾ.ಶಿ. ಮರುಳಯ್ಯ

5. ಕರ್ನಾಟಕ ಸ್ತ್ರೀ ಶಕ್ತಿ ಯೋಜನೆಯನ್ನು ಯಾವಾಗ ಪ್ರಾರಂಭಿಸಲಾಯಿತು?

ಎ) 2000 ಬಿ) 2008 ಸಿ) 2009 ಡಿ) 2019

********

ST. FRANCIS DE SALES COLLEGE
EXCELLENCE • EFFICIENCY • TRANSFORMATION
ELECTRONICS CITY, BENGALURU